**PW-1**

**ಇಂದು ದಿಃ27-01-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

ಪಾಟಿ ಸವಾಲು **:** ಶ್ರೀ ಹೆಚ್.ಎಂ.ಎಸ್ ವಕೀಲರಿಂದ **3** ನೇ ಎದುರುದಾರರ ಪರ**:**

ನಾನು ಶಾಲೆ ಕಲಿತಿಲ್ಲ. ಅಪಘಾತದ ದಿನ ನಾನು ನನ್ನ ಪರಿಚಯಸ್ತರಾದ ಮಂಜುನಾಥ ಎನ್ನುವವರ ಜೊತೆಗೆ ಗಾಡಿಯ ಮೇಲೆ ಹೊರಟಿದ್ದೆನು. ಮಂಜುನಾಥ ಇವನ ಯಾಕ್ಟೀವ್ ಗಾಡಿಗೆ ಯಾವುದೇ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಆತನ ವಾಹನದ ವಿಮೆಯನ್ನು ಹಾಜರುಪಡಿಸಿಲ್ಲ. ಅಪಘಾತದ ದಿನ 1 ನೇ ಎದುರುದಾರ ಲಾರಿಯನ್ನು ನಿದಾನವಾಗಿ ಓಡಿಸುತ್ತಿದ್ದನು ಎಂದರೆ ಸರಿಯಲ್ಲ. ಆತನದು ಯಾವೂದೇ ತಪ್ಪು ಇಲ್ಲ ಎಂದರೆ ಸರಿಯಲ್ಲ. ಮಂಜುನಾಥ ಈತನೇ ತನ್ನ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿ ಲಾರಿಗೆ ಡಿಕ್ಕಿ ಪಡಿಸಿದನು ಎಂದರೆ ಸರಿಯಲ್ಲ. ಆತನ ವಾಹನಕ್ಕೆ ವಿಮೆ ಇಲ್ಲದೇ ಇರುವ ಕಾರಣ ಪರಿಹಾರ ಸಿಗುವುದಿಲ್ಲ ಎಂದು ಗೊತ್ತಾಗಿ ಲಾರಿ ಚಾಲಕನ ವಿರುದ್ದ ಸುಳ್ಳು ಪಿರ್ಯಾದಿಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ಅಪಘಾತದ ನಂತರ ಎಸ್. ಎಸ್.ಐ.ಎಂ.ಎಸ್ ಆಸ್ಪತ್ರೆಗೆ ಹೋದೆನು. ಆಸ್ಪತ್ರೆಯಲ್ಲಿ ವೈದ್ಯರಿಗೆ ಅಪಘಾತ ಯಾವ ರೀತಿ ಆಯಿತು ಎಂದು ನಾನು ಸರಿಯಾಗಿ ತಿಳಿಸಿದ್ದೇನೆ. ಎಸ್.ಎಸ್.ಐ.ಎಂ.ಎಸ್ ಆಸ್ಪತ್ರೆಯಲ್ಲಿ ನನಗೆ ಡಾ//ವೆಂಕಟ್‌ರಮಣ ರಾವ್ ಮತ್ತು ಡಾ//ಕೆ.ಸಿ ಶಿವುಮೂರ್ತಿ ಎಂಬ ವೈದ್ಯರು ಚಿಕಿತ್ಸೆ ನೀಡಿದರು ಎಂದರೆ ಸರಿ. ಸದರಿ ಆಸ್ಪತ್ರೆಯಲ್ಲಿ ಡಾ//ನಿತಿನ್ ಸಹ ನನ್ನನ್ನು ಪರೀಕ್ಷಿಸಿರುತ್ತಾರೆ. ನಾನು ಸದರಿ ಆಸ್ಪತ್ರೆಗೆ ದಾಖಲಾದಾಗ ಡಾ//ನಿತಿನ್ ವೈದ್ಯರು ನನಗೂ ಅಪಘಾತದ ನಂತರ ಚಿಕಿತ್ಸೆ ನೀಡಿದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಅಂಗನ್ಯೂನತೆಯ ಪ್ರಮಾಣಪತ್ರವನ್ನು ಈ ಅರ್ಜಿಯ ಕುರಿತು ಹಾಜರುಪಡಿಸಿದ್ದೇನೆ ಎಂದರೆ ಸರಿ. ಸದರಿ ಅಂಗನ್ಯೂನತೆ ಪ್ರಮಾಣ ಪತ್ರ ಹೊರತುಪಡಿಸಿ, ನಾನು ಡಾ//ನಿತಿನ್ ವೈದ್ಯರ ಬಳಿ ಬೇರೆ ಚಿಕಿತ್ಸೆ ಪಡೆದ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಎಸ್.ಎಸ್.ಐ.ಎಂ.ಎಸ್ ಆಸ್ಪತ್ರೆಯಲ್ಲಿ ನನಗೆ ಸೂಕ್ತ ಚಿಕಿತ್ಸೆ ನೀಡಿ ನನ್ನನ್ನು ಪೂರ್ಣ ಗುಣಮುಖ ಆದ ನಂತರ

ಬಿಡುಗಡೆ ಮಾಡಿದ್ದಾರೆ ಎಂದರೆ ಸರಿಯಲ್ಲ.

ನಂತರದಲ್ಲಿ ನಾನು ಶಿವಮೊಗ್ಗದ ಖಾಸಗೀ ವೈದ್ಯ ಡಾ//ಅರುಣ್ ಎಂಬ ವೈದ್ಯರ ಬಳಿ ಚಿಕಿತ್ಸೆ ಪಡೆದುಕೊಂಡೆನು. ಈ ವೈದ್ಯರು ನನಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಸಾಕ್ಷಿ ರಾಡ್ ಹಾಕಿದ್ದಾರೆ ಎಂದು ಹೇಳುತ್ತಾರೆ. ರಾಡ್ ನ್ನು ಇನ್ನೂ ತೆಗೆದಿಲ್ಲ. ನಾನು ಈ ಅರ್ಜಿಯಲ್ಲಿ ಹಾಜರುಪಡಿಸಲು ಈ ಡಾ//ಅರುಣ್ ನೀಡಿದ ಅಂಗನ್ಯೂನತೆ ಪ್ರಮಾಣ ಪತ್ರವನ್ನು ಸಹ ಹಾಜರುಪಡಿಸಿದ್ದೇನೆ ಎಂದರೆ ಸರಿ. ಇದನ್ನು ಸಹ ಈ ಪರಿಹಾರದ ಅರ್ಜಿಯಲ್ಲಿ ಹಾಜರುಪಡಿಸಲು ಪಡೆದ ದಾಖಲೆ ಎಂದರೆ ಸರಿ. ನನಗೆ ಅಪಘಾತದಲ್ಲಿ ಆದ ಗಾಯಗಳಿಂದ ಯಾವುದೇ ತೀವ್ರ ಸ್ವರೂಪದ ಗಾಯ, ಅಂಗನ್ಯೂನತೆ ಅಥವಾ ಆದಾಯ ನಷ್ಟ ಆಗಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ನನಗೆ ನಡೆದಾಡಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಾನು ನನ್ನ ಚಿಕಿತ್ಸೆಗೆ ರೂ.6 ಲಕ್ಷ ಖರ್ಚು ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಅಪಘಾತದಲ್ಲಿ ಆದ ಗಾಯಗಳಿಂದ ನಿಂತುಕೊಳ್ಳಲು, ಸರಿಯಾಗಿ ಕುಳಿತುಕೊಳ್ಳಲು ಮತ್ತು ನಡೆದಾಡಲು ಆಗುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅಪಘಾತದ ಪೂರ್ವದಲ್ಲಿ ನಾನು ಬೀಡಿ ಕಟ್ಟುವ ಕೆಲಸ ಮಾಡುತ್ತಿದ್ದು, ಪ್ರತಿದಿನ ರೂ.1 ಸಾವಿರ ಆದಾಯ ಬರುತ್ತಿತ್ತು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸಾಕ್ಷಿ ಈಗ ಕೆಲಸ ಮಾಡಲು ಆಗುವುದಿಲ್ಲ ಎಂದು ಹೇಳುತ್ತಾರೆ. ಬೀಡ ಕಟ್ಟುವವರಿಗೆ ಕಾರ್ಮಿಕ ಇಲಾಖೆಯಿಂದ ಗುರುತಿನ ಚೀಟಿ ನೀಡುತ್ತಾರೆ ಎಂದರೆ ಸರಿ. ಅದನ್ನು ನಾನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಏನು ವಿಷಯ ಬರೆದಿದ್ದಾರೆ ಎಂದು ಮಾಹಿತಿ ಇದೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಡಾ//ನಿತಿನ್ ಇವರು ನನಗೆ ಚಿಕಿತ್ಸೆ ನೀಡಿದ ಬಗ್ಗೆ ಮತ್ತು ಅಂಗನ್ಯೂನತೆ ಪ್ರಮಾಣ ಪತ್ರ ಕೊಟ್ಟ ಬಗ್ಗೆ ಎಲ್ಲಿಯೂ ಬರೆದಿಲ್ಲ ಎಂದರೆ ಸರಿ. ದಿನಾಂಕಃ20-11-2020 ರಂದು ಲಾರಿಗೆ ಪರ್ಮಿಟ್ ಮತ್ತು ಎಫ್.ಸಿ ಇರಲ್ಲಿ ಎಂದರೆ ಗೊತ್ತಿಲ್ಲ. ಆ ಕಾರಣದಿಂದ ವಿಮಾ ಕಂಪನಿಯವರು ಪರಿಹಾರಕೊಡಲು ಭಾದ್ಯಸ್ಥರು

ಅಲ್ಲ ಎಂದರೆ ಸರಿಯಲ್ಲ. ಪೋಲೀಸರು ಸಲ್ಲಿಸಿದ ಫಿರ್ಯಾದಿಯಲ್ಲಿ ಲಾರಿಯ ಚಾಲಕನ ಹೆಸರು ಬರೆದಿಲ್ಲ ಎಂದರೆ ಸರಿ. ಅಪಘಾತ ಪಡಿಸಿದ ಚಾಲಕನಿಗೆ ಡಿ.ಎಲ್ ಇಲ್ಲದೇ ಇದ್ದ ಕಾರಣ ಮೊದಲು ಪ್ರ.ವ.ವರದಿಯಲ್ಲಿ ಚಾಲಕನ ಹೆಸರು ಕಾಣಿಸದೇ ನಂತರದಲ್ಲಿ ಡಿ.ಎಲ್ ಇದ್ದ 1 ನೇ ಎದುರುದಾರನನ್ನು ಚಾಲಕ ಎಂದು ಪೋಲೀಸರ ಜೊತೆಗೆ ಶಾಮೀಲಾಗಿ ಕಾಣಿಸಿದ್ದೇವೆ ಎಂದರೆ ಸರಿಯಲ್ಲ. ವಿಮಾ ಕಂಪನಿಯಿಂದ ಪರಿಹಾರ ಪಡೆಯುವ ಉದ್ದೇಶದಿಂದ ದಾಖಲೆಗಳನ್ನು ಸೃಷ್ಠಿ ಮಾಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಹಾಜರುಪಡಿಸಿದ ವೈದ್ಯಕೀಯ ಬಿಲ್ ಗಳಲ್ಲಿ Advance ಬಿಲ್ ಗಳನ್ನು ಸಹ ಹಾಜರುಪಡಿಸಿದ್ದೇನೆ ಎಂದರೆ ಸರಿ. ರೂ.10,000/- ಎರಡು Advance ಬಿಲ್ ಗಳನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿ. ಲಾರಿ ಚಾಲಕನ ತಪ್ಪಿನಿಂದ ಯಾವುದೇ ಅಪಘಾತ ಆಗದೇ ಇದ್ದ ಕಾರಣ 3 ನೇ ಎದುರುದಾರರು ಯಾವುದೇ ಪರಿಹಾರಕೊಡಲು ಭಾದ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ: ಇರುವುದಿಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೇ ಸರಿ ಇದೆ.

ಸಹಿ/-

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಹರಿಹರ.**